# ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ

**ಕೇಂದ್ರ ಕಛೇರಿ, ಸಾರಿಗೆ ಸದನ, ಕಲಬುರಗಿ.**

ಸಂಖ್ಯೆ: ಕಕಸಾ/ಕೇಕ/ನೇಮಕ/ನೇ1/ಕಸ–387/964/2022-23 ದಿನಾಂಕ: 17.08.2022

## ನೇಮಕಾತಿ ಜಾಹೀರಾತು ಸಂಖ್ಯೆ: 1/2022

**ಹೈದ್ರಾಬಾದ ಕರ್ನಾಟಕ ಪ್ರದೇಶದ 371(ಜೆ) ಸ್ಥಳೀಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಮಾತ್ರ**

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಖಾಲಿ ಇರುವ ದರ್ಜೆ-3 ಮೇಲ್ವಿಚಾರಕೇತರ ಸ್ಥಳೀಯ ವೃಂದದ **ಕುಶಲಕರ್ಮಿ, ತಾಂತ್ರಿಕ ಸಹಾಯಕ, ಸಹಾಯಕ ಸಂಚಾರ ನಿರೀಕ್ಷಕ, ಕ.ರಾ.ಸಾ. ಪೇದೆ ಮತ್ತು ಸಹಾಯಕ ಲೆಕ್ಕಿಗ ಹಿಂಬಾಕಿ (Backlog) ಹುದ್ದೆಗಳನ್ನು** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿಗಳು–1982 ಮತ್ತು ತದನಂತರದ ತಿದ್ದುಪಡಿಗಳ ಅನುಸಾರ ಹಾಗೂ ಸಂವಿಧಾನದ ಅನುಚ್ಛೇಧ 371(ಜೆ) ರನ್ವಯ ಹೈದ್ರಾಬಾದ ಕರ್ನಾಟಕ ಪ್ರದೇಶದ ಸ್ಥಳೀಯ ಅಭ್ಯರ್ಥಿಗಳಿಗಾಗಿ ನೇಮಕಾತಿಯಲ್ಲಿ ಮೀಸಲಾತಿ (ಕರ್ನಾಟಕ ಸಾರ್ವಜನಿಕ ಉದ್ಯೋಗ ತಿದ್ದುಪಡಿ ಆದೇಶ 2013) ಅನುಸಾರ ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲು ಸಂವಿಧಾನದ ಅನುಚ್ಛೇಧ 371(ಜೆ) ಅನ್ವಯ ಅರ್ಹ ಸ್ಥಳೀಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಂದ ಆನ್‌ಲೈನ್ (Online) ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಅರ್ಜಿ ಸಲ್ಲಿಸಲು ಆರಂಭದ ದಿನಾಂಕ: 26.08.2022 & ಕೊನೆಯ ದಿನಾಂಕ: 30.09.2022**

**ಅರ್ಜಿ ಸಲ್ಲಿಸಲು ಸಂಪರ್ಕಿಸಬೇಕಾದ ವೆಬ್‌ಸೈಟ್ ವಿಳಾಸ:**

www.kkrtcjobs.karnataka.gov.in ಅಥವಾ www.kkrtc.in/jobs

**ಅಭ್ಯರ್ಥಿಗಳು ಸಲ್ಲಿಸುವ ಎಲ್ಲಾ ದಾಖಲೆಗಳು/ ಪ್ರಮಾಣ ಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದುಕೊಂಡಿರತಕ್ಕದ್ದು ಮತ್ತು ಚಾಲ್ತಿಯಲ್ಲಿರತಕ್ಕದ್ದು. ಸದರಿ ದಾಖಲೆಗಳನ್ನು ದಾಖಲಾತಿ ಪರಿಶೀಲನಾ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.**

**01) ಹುದ್ದೆವಾರು ರೋಸ್ಟರ್ ಬಿಂದುಗಳ ವರ್ಗೀಕರಣ:**

**1) ಕುಶಲಕರ್ಮಿ:**

| ವರ್ಗೀಕರಣ | (i) ಕುಶಲಕರ್ಮಿ (Auto Mechanic) | (ii) ಕುಶಲಕರ್ಮಿ (Auto BodyBuilder) | (iii) ಕುಶಲಕರ್ಮಿ (Auto Painter) | | (iv) ಕುಶಲಕರ್ಮಿ (Auto Welder) | | (v) ಕುಶಲಕರ್ಮಿ (Auto Electrician) |
|---|---|---|---|---|---|---|---|
| | SC | ST | SC | ST | SC | ST | SC |
| ಸಾಮಾನ್ಯ | 1 | 3 | 5 | 1 | 5 | 1 | 2 |
| ಗ್ರಾಮೀಣ | 1 | - | - | - | - | - | - |
| **ಒಟ್ಟು** | **2** | **3** | **5** | **1** | **5** | **1** | **2** |

**2) ತಾಂತ್ರಿಕ ಸಹಾಯಕ:**

| ವರ್ಗೀಕರಣ | SC | ST | ಒಟ್ಟು |
|---|---|---|---|
| ಸಾಮಾನ್ಯ | 1 | - | 1 |
| ಮಹಿಳಾ | - | 1 | 1 |
| ಗ್ರಾಮೀಣ | - | 1 | 1 |
| **ಒಟ್ಟು** | **1** | **2** | **3** |

**3) ಸಹಾಯಕ ಸಂಚಾರ ನಿರೀಕ್ಷಕ:**

| ವರ್ಗೀಕರಣ | SC | ST | ಒಟ್ಟು |
|---|---|---|---|
| ಸಾಮಾನ್ಯ | 4 | 2 | 6 |
| **ಒಟ್ಟು** | **4** | **2** | **6** |

**4) ಕ.ರಾ.ಸಾ. ಪೇದೆ:**

| ವರ್ಗೀಕರಣ | SC |
|---|---|
| ಸಾಮಾನ್ಯ | 1 |
| ಗ್ರಾಮೀಣ | 4 |
| **ಒಟ್ಟು** | **5** |

**5) ಸಹಾಯಕ ಲೆಕ್ಕಿಗ:**

| ವರ್ಗೀಕರಣ | SC |
|---|---|
| ಸಾಮಾನ್ಯ | 1 |
| **ಒಟ್ಟು** | **1** |

**ಟಿಪ್ಪಣಿ:** ಕ.ಕ.ರ.ಸಾ. ನಿಗಮದ (ಹಿಂದಿನ ಈ.ಕ.ರ.ಸಾ. ಸಂಸ್ಥೆಯ) ಜಾಹೀರಾತು ಸಂಖ್ಯೆ 03/2014 ದಿನಾಂಕ: 03.09.2014 ರ ಆಯ್ಕೆ ಸಮಯದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಮೀಸಲಾತಿಗೆ ಅನುಗುಣವಾಗಿ ಹುದ್ದೆಗಳ ಆಯ್ಕೆಗೆ ಅಭ್ಯರ್ಥಿಗಳ ಕೊರತೆಯಿಂದಾಗಿ ಉದ್ಭವವಾದ ಹಾಗೂ ಆಯ್ಕೆಗೊಂಡ ಹುದ್ದೆಯಲ್ಲಿ ಹಾಜರಾಗದ ಕಾರಣ ಬಾಕಿ ಉಳಿದಿರುವ ಸ್ಥಳೀಯ ವೃಂದದ ಒಟ್ಟು 34 ಹಿಂಬಾಕಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ.

**02) ವಿದ್ಯಾರ್ಹತೆ:**

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗಾಗಿ ಈ ಕೆಳಗೆ ನಮೂದಿಸಿರುವ ನಿಗದಿತ ವಿದ್ಯಾರ್ಹತೆಯನ್ನು ಹೊಂದಿರಬೇಕು.

| ಕ್ರ.ಸಂ | ಹುದ್ದೆ | ನಿಗದಿಪಡಿಸಿದ ವಿದ್ಯಾರ್ಹತೆ |
|---|---|---|
| 1 (i) | ಕುಶಲಕರ್ಮಿ<br>Auto Mechanic | ಅ) ಸರ್ಕಾರದಿಂದ ಮಾನ್ಯತೆ ಪಡೆದ ಒಂದು ಸಂಸ್ಥೆಯಿಂದ ಮೆಕ್ಯಾನಿಕಲ್/ ಆಟೋಮೊಬೈಲ್/ ವೆಲ್ಡಿಂಗ್ & ಶೀಟ್ ಮೆಟಲ್ ಟೆಕ್ನಾಲಜಿಯಲ್ಲಿ 3 ವರ್ಷದ ಇಂಜನಿಯರಿಂಗ್ ಡಿಪ್ಲೋಮಾ ಪಡೆದಿರಬೇಕು.<br>ಬ) ಚಾಲ್ತಿಯಲ್ಲಿರುವ ಭಾರಿ ಪ್ರಯಾಣಿಕರ ವಾಹನ ಚಾಲನಾ ಪರವಾನಿಗೆ ಹೊಂದಿರಬೇಕು ಅಥವಾ ಪರೀಕ್ಷಾರ್ಥ ಅವಧಿ ಮುಗಿಯುವುದರೊಳಗೆ ಹೊಂದತಕ್ಕದ್ದು.<br>a) Must be holder of three years course in Diploma from a recognized Institution in Mechanical/ Automobile/ Welding & Sheet metal Technology Engineering.<br>b) Must possess a valid current HTV License or obtain the one before completion of the period of probation. |
| 1 (ii) | ಕುಶಲಕರ್ಮಿ<br>Auto Body Builder | |
| 1 (iii) | ಕುಶಲಕರ್ಮಿ<br>Auto Welder | |
| 1 (iv) | ಕುಶಲಕರ್ಮಿ<br>Auto Painter | |

| | | |
|---|---|---|
| 1 (v) | ಕುಶಲಕರ್ಮಿ<br>Auto Electrician | ಅ) ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಎಲೆಕ್ಟ್ರಿಕಲ್/ ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್/ ಮೆಕ್ಯಾಟ್ರಾನಿಕ್ಸ್ ಇಂಜಿನಿಯರಿಂಗ್/ ರೆಫ್ರಿಜರೇಷನ್ ಮತ್ತು ಏರ್ ಕಂಡಿಷನಿಂಗ್‌ನಲ್ಲಿ ೩ ವರ್ಷಗಳ ಇಂಜಿನಿಯರಿಂಗ್ ಡಿಪ್ಲೋಮಾ ಪಡೆದಿರಬೇಕು.<br>ಬ) ಚಾಲ್ತಿಯಲ್ಲಿರುವ ಭಾರಿ ವಾಹನ ಚಾಲನಾ ಪರವಾನಿಗೆ ಹೊಂದಿರಬೇಕು ಅಥವಾ ಪರೀಕ್ಷಾರ್ಥ ಅವಧಿ ಮುಗಿಯುವುದರೊಳಗೆ ಹೊಂದತಕ್ಕದ್ದು.<br><br>a) Must be holder of 03 years course in Diploma from a recognized Institution in Electrical/ Electrical & Electronics/ Mechatronics Engineering / Refrigeration & Air Conditioning for Auto Electrician.<br>b) Must possess a valid current HTV License OR obtain the one before completion of the period of probation. |
| 2 | ತಾಂತ್ರಿಕ ಸಹಾಯಕ | ಅ) ಪ್ರೌಢ ಶಿಕ್ಷಣ ಮಂಡಳಿಯಿಂದ ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ನಂತರ ತಾಂತ್ರಿಕ ಮಂಡಳಿ ಅಥವಾ ಸರ್ಕಾರದಿಂದ ಅಂಗೀಕೃತವಾದ ಸಂಸ್ಥೆಯಲ್ಲಿ ಐ.ಟಿ.ಸಿ./ ಐ.ಟಿ.ಐ./ ಎನ್.ಎ.ಸಿ.ಯಲ್ಲಿ ಮೆಕ್ಯಾನಿಕ್ (ಮೋಟಾರ್ ವೆಹಿಕಲ್)/ ಡೀಸೆಲ್ ಮೆಕ್ಯಾನಿಕ್/ ಆಟೋ ಎಲೆಕ್ಟ್ರಿಷಿಯನ್/ ವೆಲ್ಡರ್/ ಶೀಟ್ ಮೆಟಲ್ ವರ್ಕರ್/ ಎಲೆಕ್ಟ್ರಾನಿಕ್ ಮೆಕ್ಯಾನಿಕ್/ ಅಪ್ಹೋಲ್‌ಸ್ಟ್ರಿ/ ಡ್ರಾಫ್ಟ್ಸ್‌ಮನ್ (ಮೆಕ್ಯಾನಿಕಲ್)/ ಫಿಟ್ಟರ್/ ಮಷಿನಿಸ್ಟ್/ ಟೈರ್ ಫಿಟ್ಟಿಂಗ್/ ವಲ್ಕನೈಸಿಂಗ್/ ಪೇಂಟಿಂಗ್/ ರೆಫ್ರಿಜರೇಷನ್ & ಏರ್ ಕಂಡೀಷನಿಂಗ್/ ಟರ್ನರ್/ ಆಟೋಮೊಬೈಲ್/ ಎಲೆಕ್ಟ್ರಿಕಲ್/ ಎಲೆಕ್ಟ್ರಾನಿಕ್ಸ್/ ಫ್ಯಾಬ್ರಿಕೇಷನ್ (ಫಿಟ್ಟಿಂಗ್ & ವೆಲ್ಡಿಂಗ್) ವೃತ್ತಿಗಳಲ್ಲಿ ಉತ್ತೀರ್ಣರಾಗಿರಬೇಕು.<br>ಬ) ಪರೀಕ್ಷಾರ್ಥ ಸೇವೆ ಪೂರ್ಣಗೊಳ್ಳುವುದರೊಳಗೆ ಲಘು ಮೋಟಾರು ವಾಹನ ಚಾಲನಾ ಪರವಾನಿಗೆಯನ್ನು ಹೊಂದತಕ್ಕದ್ದು.<br><br>a) Pass in ITC/ITI/NAC in Mechanic (Motor Vehicle) / Diesel Mechanic/ Auto Electrician/ Welder/ Sheet Metal Worker/ Electronic -Mechanic/ Upholstery/ Draftsman (Mechanical)/ Fitter/ Machinist/ Tyre Fitting/ Vulcanizing/ painting/ Refrigeration and Air Conditioning/ Turner/ Automobile/ Electrical/ Electronics/ Fabrication (Fitting & Welding), from an institution recognized by the Technical Board/or the Government after a pass in secondary board education.<br>b) Shall obtain Light Motor Driving License before completion of probationary period. |
| 3 | ಸಹಾಯಕ ಸಂಚಾರ ನಿರೀಕ್ಷಕ | ಪದವಿ ಪೂರ್ವ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು.<br>A Pass in pre-University examination in First Class. |
| 4 | ಕ.ರಾ.ಸಾ. ಪೇದೆ | ಪಿ.ಯು.ಸಿ ಉತ್ತೀರ್ಣರಾಗಿರಬೇಕು ಅಥವಾ ಮಾಜಿ ಸೈನಿಕರಾಗಿದ್ದು, 2ನೇ ದರ್ಜೆ ಆರ್ಮಿ ಸರ್ಟಿಫಿಕೇಟ್ ಅಥವಾ ನೌಕಾದಳ/ ವಾಯುದಳದಲ್ಲಿ ತತ್ಸಮಾನ ದರ್ಜೆಯ ಸರ್ಟಿಫಿಕೇಟ್ ಹೊಂದಿರಬೇಕು.<br><br>Must have passed PUC or Must be an Ex-service personnel with Second class Army Certificate or equivalent grade in Navy/Air Force. |
| 5 | ಸಹಾಯಕ ಲೆಕ್ಕಿಗ | ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಮೂರು ವರ್ಷಗಳ ವಾಣಿಜ್ಯ ಪದವಿ ಹೊಂದಿರಬೇಕು. ಗಣಕಯಂತ್ರ ಜ್ಞಾನ ಅತ್ಯವಶ್ಯವಾಗಿರುತ್ತದೆ.<br>A Bachelor Degree in Commerce three years course from a University established by Law. Computer Knowledge is Essential. |

**ವಿಶೇಷ ಸೂಚನೆ:**

1. ಆಯ್ಕೆಗೊಳ್ಳುವ ಅಭ್ಯರ್ಥಿಗಳು ನಿಯಮಾನುಸಾರ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಶೇ.50 ಅಂಕಗಳಿಗೆ ಕಡಿಮೆ ಇಲ್ಲದಂತೆ ಪಡೆದು ಉತ್ತೀರ್ಣರಾಗತಕ್ಕದ್ದು.
2. ತಾಂತ್ರಿಕ ಸಹಾಯಕ ಹುದ್ದೆಗೆ: ಅಪ್ಹೋಲ್ಸ್ಟ್ರಿ (ಹೊಲಿಗೆ) ವೃತ್ತಿಗೆ ಕ್ಲಾಥಿಂಗ್ ಅಂಡ್ ಎಂಬ್ರಾಯಿಡರಿ ಹಾಗೂ ಕಟ್ಟಿಂಗ್ ಮತ್ತು ಸೂಯಿಂಗ್ ವೃತ್ತಿಗಳನ್ನು ಸಮಾನವೆಂದು ಪರಿಗಣಿಸಲಾಗುವುದಿಲ್ಲ.
3. ಕುಶಲಕರ್ಮಿ (ಆಟೋ ಎಲೆಕ್ಟ್ರಿಷಿಯನ್) ಹುದ್ದೆಗೆ: ಎಲೆಕ್ಟ್ರಿಕಲ್ ವೈರಿಂಗ್ ಅಪ್ಲೈಯನ್ಸಸ್ ವೃತ್ತಿಯನ್ನು ಪರಿಗಣಿಸಲಾಗುವುದಿಲ್ಲ.
4. ಕುಶಲಕರ್ಮಿ (ಎಲ್ಲಾ ವೃತ್ತಿ) & ತಾಂತ್ರಿಕ ಸಹಾಯಕ ಹುದ್ದೆಗಳಿಗೆ: ನಿಗದಿಪಡಿಸಿದ ವೃತ್ತಿಗಳಲ್ಲದೆ ಬೇರೆ ಯಾವುದೇ ವೃತ್ತಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

**03) ವಯೋಮಿತಿ :**

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಈ ಕೆಳಕಂಡಂತೆ ವಯೋಮಿತಿ ಹೊಂದಿರತಕ್ಕದ್ದು.

| ಕನಿಷ್ಠ ವಯಸ್ಸು | ಗರಿಷ್ಠ ವಯಸ್ಸು |
|---|---|
| 18 ವರ್ಷ ಪೂರ್ಣಗೊಂಡಿರಬೇಕು | 40 ವರ್ಷ ಮೀರಿರಬಾರದು |

**ಸಾರಿಗೆ ನಿಗಮ/ಸಂಸ್ಥೆಗಳ ಇಲಾಖಾ ಅಭ್ಯರ್ಥಿಗಳಿಗಾಗಿ.**

a) ಇಲಾಖಾ ಅಭ್ಯರ್ಥಿಗಳಿಗೆ ಗರಿಷ್ಠ 10 ವರ್ಷ ಮೀರದಂತೆ ಅವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ನೇಮಕಾತಿ ಹೊಂದಿ ಪರೀಕ್ಷಾರ್ಥ ಸೇವೆಯ ಮೇಲೆ ನಿಯೋಜಿಸಲ್ಪಟ್ಟ ದಿನಾಂಕದಿಂದ ಸೇವೆ ಸಲ್ಲಿಸಿದ ಪ್ರತಿ ವರ್ಷಕ್ಕೆ 1 ವರ್ಷ ವಯೋಮಿತಿಯಲ್ಲಿ ರಿಯಾಯಿತಿಯನ್ನು ನೀಡಲಾಗುವುದು. ಆದರೆ ಅವರ ವಯಸ್ಸು 45 ವರ್ಷಗಳಿಗೆ ಮೀರಿರಬಾರದು.

b) ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವ ಇಲಾಖಾ ಅಭ್ಯರ್ಥಿಗಳು ವಯೋಮಿತಿ ವಿನಾಯಿತಿಯನ್ನು ಹೊರತುಪಡಿಸಿ ಜಾಹೀರಾತಿನಲ್ಲಿ ತಿಳಿಸಿರುವ ಉಳಿದೆಲ್ಲಾ ಷರತ್ತು ಮತ್ತು ಮಾನದಂಡಗಳ ವಿಷಯದಲ್ಲಿ ಇತರೆ ಅಭ್ಯರ್ಥಿಗಳೊಂದಿಗೆ ಸ್ಪರ್ಧಿಸಬೇಕಿರುತ್ತದೆ.

c) KSRTC, BMTC, NWKRTC ಅಥವಾ KKRTC ಯಲ್ಲಿ ಸೇವೆಯಲ್ಲಿರುವವರು: ಸಂಬಂಧಪಟ್ಟ ನೇಮಕ ಪ್ರಾಧಿಕಾರಸ್ಥರಿಂದ ಜಾಹೀರಾತಿನಲ್ಲಿ ಕರೆಯಲಾದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಪಡೆದ ನಿರಾಕ್ಷೇಪಣಾ ಹಾಗೂ ಸೇವಾ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಮೂಲ ದಾಖಲಾತಿ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸುವುದು.

**04) ಮೀಸಲಾತಿಗಳು:**

**a) ಜಾತಿ ಮೀಸಲಾತಿ:**

ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು.

**b) ಗ್ರಾಮೀಣ ಮೀಸಲಾತಿ:**

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/08/ಸೆನೆನಿ/2001 ದಿನಾಂಕ:13/02/2001 ಮತ್ತು ಸಂಖ್ಯೆ:ಸಿಆಸುಇ/96/ಸೆನೆನಿ/2005 ದಿನಾಂಕ:10/08/2005 ಗಳಂತೆ ಚಾಲ್ತಿಯಲ್ಲಿರುವ ನಿಯಮಾವಳಿಗಳನ್ವಯ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿ, ಕಡ್ಡಾಯವಾಗಿ ನಿಗದಿತ

ನಮೂನೆಯಲ್ಲಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರ ಸಹಿ ಮತ್ತು ಮೊಹರು ಹಾಗೂ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯ ಮೇಲು ಸಹಿ ಹಾಗೂ ಮೊಹರು ಇರುವ ಪ್ರಮಾಣಪತ್ರ ಹೊಂದಿದ್ದಲ್ಲಿ ಮಾತ್ರ ಗ್ರಾಮೀಣ ಮೀಸಲಾತಿಗೆ ಅರ್ಹರಾಗುವರು.

c) **ಅನುಚ್ಛೇಧ 371(ಜೆ) ಅಡಿ ಸ್ಥಳೀಯ ಅಭ್ಯರ್ಥಿ ಮೀಸಲಾತಿ:**
ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) ನಿಯಮಗಳು, 2013 ಮತ್ತು ಅದರಡಿ ಹೊರಡಿಸಲಾದ ಆದೇಶಗಳನುಸಾರ/ನಿಯಮಾವಳಿಗಳನ್ವಯ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬೇಕಾದಲ್ಲಿ ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಅರ್ಹತಾ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

**05) ಅರ್ಜಿ ಸಲ್ಲಿಸುವ ವಿಧಾನ:**

a) ಅರ್ಜಿಯನ್ನು ಕಡ್ಡಾಯವಾಗಿ ಆನ್‌ಲೈನ್‌ನಲ್ಲಿಯೇ ಸಲ್ಲಿಸತಕ್ಕದ್ದು.
b) ನಿಗದಿತ ಅವಧಿಯ ನಂತರ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ.
c) ಒಮ್ಮೆ ಸಲ್ಲಿಸಿದ ಅರ್ಜಿಯ ತಿದ್ದುಪಡಿಗೆ ಅವಕಾಶವಿರುವುದಿಲ್ಲ.
d) ಅಭ್ಯರ್ಥಿಗಳು ಒಂದೇ ವಿದ್ಯಾರ್ಹತೆಯ ವಿವಿಧ ಹುದ್ದೆಗಳಿಗೆ ಪ್ರತ್ಯೇಕ/ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದಲ್ಲಿ ಮೊದಲು ಸಲ್ಲಿಸಿದ ಅರ್ಜಿಯ ನೊಂದಣಿ ಸಂಖ್ಯೆಯನ್ನು ನಂತರ ಸಲ್ಲಿಸುವ ಎಲ್ಲಾ ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.
e) ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ತಕ್ಷಣ ನೊಂದಣಿ ಸಂಖ್ಯೆಯುಳ್ಳ ಅರ್ಜಿಯ ಮುದ್ರಿತ ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಳ್ಳುವುದು ಹಾಗೂ ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು. ತಪ್ಪಿದಲ್ಲಿ ಅಭ್ಯರ್ಥನವನ್ನು ತಿರಸ್ಕರಿಸಲಾಗುವುದು.

**06) ಅರ್ಜಿ ಶುಲ್ಕ:**

ಅಭ್ಯರ್ಥಿಯು ಅರ್ಜಿ ಸಲ್ಲಿಸಬಯಸುವ ಪ್ರತಿ ಹುದ್ದೆಗೆ ₹300/- ಅರ್ಜಿ ಶುಲ್ಕ ನಿಗದಿಪಡಿಸಲಾಗಿದ್ದು, ಅದನ್ನು ಕಡ್ಡಾಯವಾಗಿ ಆನ್‌ಲೈನ್ ಮೂಲಕವೇ ಆನ್‌ಲೈನ್ ಅರ್ಜಿಯೊಂದಿಗೆ ಪಾವತಿಸತಕ್ಕದ್ದು. ಆನ್‌ಲೈನ್ ಪಾವತಿ ಹೊರತುಪಡಿಸಿ ಬೇರೆ ಯಾವುದೇ ರೀತಿಯಲ್ಲಿ ಅರ್ಜಿ ಶುಲ್ಕ ಪಾವತಿಗೆ ಅವಕಾಶ ಇರುವುದಿಲ್ಲ. ಅಲ್ಲದೇ, **ಒಮ್ಮೆ ಪಾವತಿಸಿದ ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ/ ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ**.

ಒಂದೇ ವಿದ್ಯಾರ್ಹತೆಯ ಪ್ರತ್ಯೇಕ ಹುದ್ದೆಗಳಾಗಿರುವ **ಕುಶಲಕರ್ಮಿ ಆಟೋ ಮೆಕ್ಯಾನಿಕ್, ಆಟೋ ಬಾಡಿ ಬಿಲ್ಡರ್, ಆಟೋ ವೆಲ್ಡರ್ ಮತ್ತು ಆಟೋ ಪೇಂಟರ್ ಹುದ್ದೆಗಳು ಸೇರಿದಂತೆ** ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದಲ್ಲಿ, **ಅರ್ಜಿ ಸಲ್ಲಿಸಿದ ಎಲ್ಲಾ ಹುದ್ದೆಗಳಿಗೂ ಪ್ರತ್ಯೇಕ ಅರ್ಜಿ ಶುಲ್ಕದ ಒಟ್ಟು ಮೊತ್ತವನ್ನು ಪಾವತಿಸತಕ್ಕದ್ದು**.

ಅಲ್ಲದೇ, ಸಮಾನ ವಿದ್ಯಾರ್ಹತೆಯ ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದಲ್ಲಿ, ಹುದ್ದೆಗಳ ಆದ್ಯತೆಯನ್ನು ಕಡ್ಡಾಯವಾಗಿ ನಮೂದಿಸುವುದು. ಒಮ್ಮೆ ನಮೂದಿಸಲಾದ ಆದ್ಯತೆಯನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.

**07) ನೇಮಕಾತಿ ಹಂತಗಳು:**

**ಅ) ಸಾಮಾನ್ಯ ಸಾಮರ್ಥ್ಯ ಪರೀಕ್ಷೆ (ಎಲ್ಲಾ ಹುದ್ದೆಗಳಿಗೆ):**

a) ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗೆ ಹಾಜರಾಗತಕ್ಕದ್ದು. ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯ ದಿನಾಂಕ, ಪರೀಕ್ಷಾ ಕೇಂದ್ರಗಳ ಮಾಹಿತಿಯನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.

b) ಅಭ್ಯರ್ಥಿಗಳು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಕನಿಷ್ಟ 30 ಅಂಕಗಳನ್ನು ಗಳಿಸಿ ಉತ್ತೀರ್ಣರಾಗಬೇಕು. ಕನಿಷ್ಟ 30 ಅಂಕಗಳನ್ನು ಗಳಿಸಿ ಉತ್ತೀರ್ಣರಾದ ಅಭ್ಯರ್ಥಿಗಳ ಪೈಕಿ 1:5ರ ಅನುಪಾತದಲ್ಲಿ ಮೆರಿಟ್ ಆಧಾರದಲ್ಲಿ ಅರ್ಹ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ನಡೆಸಲಾಗುವುದು.

**ಬ) ಮೂಲ ದಾಖಲಾತಿ, ದೇಹದಾರ್ಢ್ಯತೆ ಪರಿಶೀಲನೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆ:** ಸದರಿ ಹಂತವು ಹುದ್ದೆ ಆಧಾರಿತವಾಗಿದ್ದು, ವಿವರಗಳು ಕೆಳಗಿನಂತಿವೆ.

a) **ಕುಶಲಕರ್ಮಿ(ಎಲ್ಲಾ ವೃತ್ತಿಗಳು), ತಾಂತ್ರಿಕ ಸಹಾಯಕ, ಸಹಾಯಕ ಸಂಚಾರ ನಿರೀಕ್ಷಕ ಮತ್ತು ಕ.ರಾ.ಸಾ. ಪೇದೆ ಹುದ್ದೆಗಳಿಗೆ:** ಅಭ್ಯರ್ಥಿಗಳು ಕನಿಷ್ಠ ಈ ಕೆಳಕಂಡ ದೇಹದಾರ್ಢ್ಯತೆ ಹೊಂದಿರತಕ್ಕದ್ದು.

| **ಪುರುಷರು** | | **ಮಹಿಳೆಯರು** | |
|---|---|---|---|
| **ಎತ್ತರ** | **ತೂಕ** | **ಎತ್ತರ** | **ತೂಕ** |
| 163 cm | 55 kg | 153 cm | 50 kg |

**ಕ.ರಾ.ಸಾ. ಪೇದೆ ಹುದ್ದೆಗೆ** ಹೆಚ್ಚುವರಿಯಾಗಿ ಈ ಕೆಳಗಿನ ದೈಹಿಕ ಸಾಮರ್ಥ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗತಕ್ಕದ್ದು.

| ಕ್ರ.ಸಂ. | **ಪರೀಕ್ಷೆ** | **ಪುರುಷ** | **ಮಹಿಳೆ** |
|---|---|---|---|
| 1 | ಓಟ | 400 ಮೀಟರ್ 80 ಸೆಕೆಂಡ್ ಒಳಗಾಗಿ | 200 ಮೀಟರ್ 42 ಸೆಕೆಂಡ್ ಒಳಗಾಗಿ |
| 2 | ಉದ್ದ ಜಿಗಿತ | 3.50 ಮೀಟರ್ ಕಡಿಮೆ ಇಲ್ಲದಂತೆ | 3.00 ಮೀಟರ್ ಕಡಿಮೆ ಇಲ್ಲದಂತೆ |
| 3 | ಗುಂಡು ಎಸೆತ | 7.26 ಕೆ.ಜಿ. ಗುಂಡು 5.00 ಮೀಟರ್ ಕಡಿಮೆ ಇಲ್ಲದಂತೆ. | 4.00 ಕೆ.ಜಿ. ಗುಂಡು 4.50 ಮೀಟರ್ ಕಡಿಮೆ ಇಲ್ಲದಂತೆ. |

ನಿಗದಿತ ದೇಹ ದಾರ್ಢ್ಯತೆ ಮತ್ತು ಕ.ರಾ.ಸಾ. ಪೇದೆ ಹುದ್ದೆಗೆ ನಿಗದಿತ ದೈಹಿಕ ಸಾಮರ್ಥ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಮಾತ್ರ ಮೆರಿಟ್ ಆಧಾರದ ಮೇಲೆ ಆಯ್ಕೆಗೆ ಪರಿಗಣಿಸಲಾಗುವುದು.

a) **ಸಹಾಯಕ ಲೆಕ್ಕಿಗ ಹುದ್ದೆಗೆ:** ದೇಹ ದಾರ್ಢ್ಯತೆ/ ದೈಹಿಕ ಸಾಮರ್ಥ್ಯ ಪರೀಕ್ಷೆಗಳ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ, ನಿಗದಿತ ಎಲ್ಲಾ ದಾಖಲೆಗಳನ್ನು ಹೊಂದಿದ ಅಭ್ಯರ್ಥಿಗಳನ್ನು ಮಾತ್ರ ಮೆರಿಟ್ ಆಧಾರದ ಮೇಲೆ ಆಯ್ಕೆಗೆ ಪರಿಗಣಿಸಲಾಗುವುದು.

**08) <u>ಮೆರಿಟ್ ವಿಧಾನ:</u>**

ಮೇಲಿನ ಎರಡೂ ಹಂತಗಳಲ್ಲಿ ಅರ್ಹಗೊಂಡ ಅಭ್ಯರ್ಥಿಗಳನ್ನು ಆಯಾ ಹುದ್ದೆಗೆ ನಿಗದಿಪಡಿಸಲಾದ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಪಡೆದ ಒಟ್ಟು ಅಂಕಗಳ ಶೇಕಡಾ 25 ರಷ್ಟು ಮತ್ತು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇಕಡಾ 75 ರಷ್ಟು ಅಂಕಗಳನ್ನು ಕ್ರೋಢೀಕರಿಸಿ ಮೆರಿಟ್ ಮತ್ತು ಮೀಸಲಾತಿ ಅನುಸಾರ ಮುಂದಿನ ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲಾಗುವುದು.

**09) <u>ತರಬೇತಿ ಅವಧಿ, ಭತ್ಯೆ ಹಾಗೂ ವೇತನ ಶ್ರೇಣಿ:</u>**

ಆಯ್ಕೆಗೊಂಡ ಅಭ್ಯರ್ಥಿಗಳನ್ನು ಒಂದು ವರ್ಷ ಕೆಲಸದ ಮೇಲಿನ ತರಬೇತಿಗೆ (On Job Training) ನಿಯೋಜಿಸಲಾಗುವುದು. ತರಬೇತಿ ಅವಧಿಯಲ್ಲಿ ಮಾಸಿಕ ತರಬೇತಿ ಭತ್ಯೆ ಹಾಗೂ ಅರ್ಹತೆ ಅನುಸಾರ ಇತರೆ ಭತ್ಯೆಗಳನ್ನು ಪಾವತಿಸಲಾಗುವುದು. ತರಬೇತಿ ಅವಧಿಯನ್ನು ಸೇವೆಯ ಭಾಗವೆಂದು

ಪರಿಗಣಿಸಲಾಗುವುದಿಲ್ಲ. ತರಬೇತಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದ ತರಬೇತಿದಾರರನ್ನು ಎರಡು ವರ್ಷಗಳ ಅವಧಿಗೆ ಪರೀಕ್ಷಾರ್ಥ ಸೇವೆಯಲ್ಲಿ ನಿಯೋಜಿಸಲಾಗುವುದು.

**ಹುದ್ದೆವಾರು ಮಾಸಿಕ ತರಬೇತಿ ಭತ್ಯೆ ಮತ್ತು ಪರೀಕ್ಷಾರ್ಥ ಸೇವಾವಧಿಯಲ್ಲಿನ ಕಾಲಿಕ ವೇತನ ಶ್ರೇಣಿಗಳು ಕೆಳಕಂಡಂತೆ ಇರುತ್ತವೆ.**

| ಕ್ರ. ಸಂ. | ಹುದ್ದೆ | ತರಬೇತಿ ಭತ್ಯೆ (₹) | ಕಾಲಿಕ ವೇತನ ಶ್ರೇಣಿ (₹) |
|---|---|---|---|
| 1 | ಸಹಾಯಕ ಸಂಚಾರ ನಿರೀಕ್ಷಕ | 9,750/- | 13970–250–14470–320–15750–420–16590–530–18180–640–20740 |
| 2 | ಕುಶಲಕರ್ಮಿ | | |
| 3 | ತಾಂತ್ರಿಕ ಸಹಾಯಕ | 9,100/- | 11640–140–11920–170–12600–250–14100–320–15700 |
| 4 | ಕ.ರಾ.ಸಾ. ಪೇದೆ | | |
| 5 | ಸಹಾಯಕ ಲೆಕ್ಕಿಗ | 9,750/- | 14970–320–15930–420–16770–530–18360–640–21560–730–26670 |

10) **<u>ಸೂಚನೆಗಳು :-</u>**

1. ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮುನ್ನ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಸೂಚನೆಗಳನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡ ನಂತರವೇ ಅರ್ಜಿ ಸಲ್ಲಿಸುವುದು.
2. ವಿದ್ಯಾಭ್ಯಾಸಕ್ಕಾಗಿ /ಶಿಕ್ಷಣಕ್ಕಾಗಿ /ಸರ್ಕಾರಿ ಸೌಲಭ್ಯಕ್ಕಾಗಿ ಅಥವಾ ಸಾಲಕ್ಕಾಗಿ ಎಂದು ಪಡೆದಿರುವ ಜಾತಿ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.
3. ಅಭ್ಯರ್ಥಿಗಳು ಅರ್ಜಿಯಲ್ಲಿ ಕಡ್ಡಾಯವಾಗಿ SSLC ಅಥವಾ ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿಯಲ್ಲಿರುವಂತೆ ಹೆಸರನ್ನು ದಾಖಲಿಸುವುದು.
4. ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಎಲ್ಲಾ ಪ್ರಮುಖ ಘಟನಾವಳಿಗಳನ್ನು ಮತ್ತು ಮಾಹಿತಿಯನ್ನು ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿದ ಮೊಬೈಲ್ ದೂರವಾಣಿ ಸಂಖ್ಯೆಗೆ SMS ಮೂಲಕ ತಿಳಿಸಲಾಗುತ್ತದೆ. ಕಾರಣ, ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿದ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೆ ಚಾಲನೆಯಲ್ಲಿ ಇಟ್ಟುಕೊಳ್ಳತಕ್ಕದ್ದು. ಮೊಬೈಲ್ ದೂರವಾಣಿ ಅಲಭ್ಯತೆ, ಚಾಲನೆ ಇಲ್ಲದಿರುವುದು, ಇತ್ಯಾದಿಗಳಿಂದಾಗಿ ಅಭ್ಯರ್ಥಿಗೆ ಮಾಹಿತಿಯು ತಲುಪದೇ ಅನಾನುಕೂಲ ಉಂಟಾದಲ್ಲಿ ನಿಗಮವು ಜವಾಬ್ದಾರವಾಗುವುದಿಲ್ಲ. ಈ ಸಂಬಂಧ ನಂತರ ಬರುವ ಯಾವುದೇ ಮನವಿಯನ್ನು ಪರಿಗಣಿಸಲಾಗುವುದಿಲ್ಲ.
5. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯನ್ನು ತಪ್ಪದೇ ಡೌನ್‌ಲೋಡ್ ಮಾಡಿಕೊಂಡು ಪ್ರತಿಯನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.
6. ಅಭ್ಯರ್ಥಿಯು ಅರ್ಜಿಯನ್ನು ಸಮರ್ಪಕವಾಗಿ ಭರ್ತಿ ಮಾಡದೇ ಅರ್ಜಿಯು ತಿರಸ್ಕೃತವಾದಲ್ಲಿ ಅಥವಾ ಯಾವುದೇ ಸೌಲಭ್ಯದಿಂದ ಅವರು ವಂಚಿತರಾದಲ್ಲಿ ಅದಕ್ಕೆ ಅಭ್ಯರ್ಥಿಗಳೇ ನೇರ ಜವಾಬ್ದಾರರು.
7. ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ನಡೆಸಲಾಗುವ ದಿನಾಂಕ, ಸಮಯ, ಸ್ಥಳ, ಇತ್ಯಾದಿಗಳ ವಿವರಗಳನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು. ಅಲ್ಲದೇ, ಮೂಲ ದಾಖಲಾತಿ ಹಾಗೂ ದೇಹದಾರ್ಢ್ಯತೆ ಪರಿಶೀಲನೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆ ನಡೆಸಲಾಗುವ ದಿನಾಂಕ, ಸ್ಥಳ, ಸಲ್ಲಿಸಬೇಕಾದ ದಾಖಲಾತಿಗಳು, ಇತ್ಯಾದಿಗಳ ವಿವರಗಳನ್ನು ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ನಿಗದಿತ ಅಂಕಗಳನ್ನು ಪಡೆದು 1:5ರ ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ಮಾತ್ರ ತಿಳಿಸಲಾಗುವುದು.

8. ಸಾಮಾನ್ಯ ಸಾಮರ್ಥ್ಯ ಪರೀಕ್ಷೆ/ ದಾಖಲಾತಿ ಪರಿಶೀಲನೆ/ ದೇಹ ದಾರ್ಢ್ಯತೆ/ ದೈಹಿಕ ಸಾಮರ್ಥ್ಯ ಪರೀಕ್ಷೆ ಇತ್ಯಾದಿಗಳಿಗಾಗಿ ಪ್ರಯಾಣ ವೆಚ್ಚ ಹಾಗೂ ಇತರೇ ವೆಚ್ಚಗಳನ್ನು ಅಭ್ಯರ್ಥಿಯೇ ಭರಿಸತಕ್ಕದ್ದು, ನಿಗಮದಿಂದ ಯಾವುದೇ ವೆಚ್ಚ ಪಾವತಿಸಲಾಗುವುದಿಲ್ಲ.
9. ಅರ್ಜಿಯಲ್ಲಿ ಸುಳ್ಳು ಮಾಹಿತಿ ನೀಡಿ ಅಥವಾ ನಕಲಿ ಪ್ರಮಾಣ ಪತ್ರ /ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆದಿರುವುದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ, ಅವರನ್ನು ನಿಗಮದ ನಿಯಮಾವಳಿಗಳ ಪ್ರಕಾರ ಯಾವುದೇ ಮುನ್ಸೂಚನೆ ನೀಡದೇ ಯಾವುದೇ ಸಮಯದಲ್ಲಾದರೂ ನೌಕರಿಯಿಂದ ತೆಗೆದು ಹಾಕಲಾಗುವುದು /ವಜಾ ಮಾಡಲಾಗುವುದು. ಜೊತೆಗೆ ಅವರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು.
10. ಆನ್‌ಲೈನ್ ಅರ್ಜಿಯಲ್ಲಿ ಅಭ್ಯರ್ಥಿಯು ಘೋಷಿಸಿರುವ ಮಾಹಿತಿಗಳೇ ಅಂತಿಮವಾಗಿದ್ದು, ಹೆಚ್ಚಿನ ಮಾಹಿತಿ/ ದಾಖಲೆಗಳ ಸಲ್ಲಿಕೆಗೆ ಅವಕಾಶವಿರುವುದಿಲ್ಲ.
11. ಅಭ್ಯರ್ಥಿಯು ಸಲ್ಲಿಸುವ ಸಮಯದಲ್ಲಿ ಪ್ರಮಾಣ ಪತ್ರಗಳಲ್ಲಿ ನಮೂದಾಗಿರುವ ಎಲ್ಲಾ ವಿವರಗಳು ತನ್ನದೇ ಎನ್ನುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.
12. ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಸಂಬಂಧಿಸಿದ ಎಲ್ಲಾ ಪತ್ರ ವ್ಯವಹಾರಗಳನ್ನು ಅರ್ಜಿಯಲ್ಲಿ ನಮೂದಿಸಿದ ವಿಳಾಸಕ್ಕೆ ಮಾಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ.
13. ನೈತಿಕ ದುರ್ನಡತೆಯಿಂದಾಗಿ ಅಥವಾ ನೀತಿ ಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವಾ ಈ ಸಂಸ್ಥೆಯಲ್ಲಿ ಅಥವಾ ರಾಜ್ಯ/ ಕೇಂದ್ರ/ ಸ್ಥಳೀಯ ಸಂಸ್ಥೆ/ ಕೈಗಾರಿಕಾ/ ವಾಣಿಜ್ಯಕ್ಕೆ ಸಂಬಂಧಪಟ್ಟ ಅಥವಾ ರಾಜ್ಯ ಸಾರಿಗೆ ಅಧೀನದಲ್ಲಿರುವ ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ/ ನೀತಿ ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿ ಅಥವಾ ಈ ಹಿಂದೆ ರಾಜ್ಯದ ಯಾವುದಾದರೂ ಸಾರಿಗೆ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು/ನೀತಿ ಬಾಹಿರ ಚಟುವಟಿಕೆಯಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ/ ವಜಾ ಮಾಡಲ್ಪಟ್ಟಿದ್ದಲ್ಲಿ/ ಕಾನೂನು ಬಾಹಿರವಾಗಿ ಬಹು ಪತ್ನಿತ್ವ/ ಪತಿತ್ವ ಹೊಂದಿರುವ, ಇತ್ಯಾದಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅನರ್ಹರಾಗಿರುತ್ತಾರೆ.
14. ಯಾವುದೇ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ಅರ್ಹತೆಯನ್ನು (Criteria) ಸರಿಯಾಗಿ ತಿಳಿದುಕೊಂಡು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು.
15. SSLC ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಧ್ಯಯನ ಮಾಡದೇ ಇದ್ದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ನಿಗಮದ ವತಿಯಿಂದ ನಡೆಸಲ್ಪಡುವ ಕನ್ನಡ ಭಾಷಾ ಜ್ಞಾನದ ಪರೀಕ್ಷೆಯಲ್ಲಿ ಒಂದೇ ಅವಕಾಶದಲ್ಲಿ ಉತ್ತೀರ್ಣರಾಗಬೇಕು ಇಲ್ಲದಿದ್ದಲ್ಲಿ ಅವರ ಆಯ್ಕೆಯನ್ನು ರದ್ದುಗೊಳಿಸಲಾಗುವುದು.
16. ಕನ್ನಡ ಭಾಷಾ ಜ್ಞಾನವನ್ನು ಹೊಂದುವಿಕೆಯಿಂದ ಈ ಕೆಳಕಂಡವರಿಗೆ ವಿನಾಯ್ತಿ ನೀಡಲಾಗಿದೆ.
    A. ಕರ್ನಾಟಕ ರಾಜ್ಯದಲ್ಲಿ ವಾಸವಿರುವ ಮಾಜಿ ಸೈನಿಕರು ಮತ್ತು ಅವರ ಮಕ್ಕಳು.
    B. ಕರ್ನಾಟಕದಲ್ಲಿ ಕೇಂದ್ರ ಸರ್ಕಾರದ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವವರ ಮಕ್ಕಳು.
    C. ರಾಜ್ಯದ ಹೊರಗಡೆ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ ಸರ್ಕಾರದ ನೌಕರರ ಮಕ್ಕಳು.
    D. ಕರ್ನಾಟಕದಲ್ಲಿನ ಸಾರ್ವಜನಿಕ ಉದ್ದಿಮೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಮಕ್ಕಳು.

    ಸದರಿ ವಿನಾಯಿತಿಗೆ ಸೂಕ್ತ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು. ಅಂತಹ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಲಾಗುವುದು.
17. ನೇಮಕಾತಿಯಾಗಿ ಸೇವೆಯಲ್ಲಿ ಖಾಯಂಗೊಳ್ಳುವ ಅಭ್ಯರ್ಥಿಗಳು ಉಪದಾನ ಪಾವತಿ ಕಾಯ್ದೆ 1972 ರನ್ವಯ ಉಪದಾನ ಪಡೆಯಲು ಅರ್ಹರಿರುತ್ತಾರೆ. ಮುಕ್ತ ವೇತನ ಶ್ರೇಣಿಗೆ ಅರ್ಹರಾಗಿರುವುದಿಲ್ಲ.

18. ಅಭ್ಯರ್ಥಿಯು ತನ್ನ ಆಯ್ಕೆಗಾಗಿ ಯಾವುದೇ ವಿಧವಾದ ಪ್ರಚಾರ ಮಾಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ಯಾವ ಮುನ್ಸೂಚನೆ ನೀಡದೇ ಅವರನ್ನು ಅನರ್ಹಗೊಳಿಸಲಾಗುವುದು.
19. ಅಭ್ಯರ್ಥಿಯು ಸಾರ್ವಜನಿಕ ಉದ್ದಿಮೆ ಅಥವಾ ಕರ್ನಾಟಕ ಸರ್ಕಾರ ಅಥವಾ ಕೇಂದ್ರ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅಂತಹ ಅಭ್ಯರ್ಥಿಯು ಸೂಕ್ತ ಪ್ರಾಧಿಕಾರಸ್ಥರಿಂದ ಈ ಸಂಸ್ಥೆಗೆ ಅರ್ಜಿ ಸಲ್ಲಿಸಲು ಆಕ್ಷೇಪಣೆ ಇಲ್ಲವೆಂಬ ಬಗ್ಗೆ ನಿರಾಕ್ಷೇಪಣಾ ಪತ್ರವನ್ನು ಹಾಜರುಪಡಿಸತಕ್ಕದ್ದು.
20. ನೇಮಕಾತಿಯ ವಿವಿಧ ಹಂತಕ್ಕೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಆದ್ದರಿಂದ, ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ಅಭ್ಯರ್ಥಿಗಳು ಯಾವುದೇ ರೀತಿಯ ಪತ್ರ ವ್ಯವಹಾರ ಅಥವಾ ವಿಚಾರಣೆಗಳಿಗೆ ಆಸ್ಪದವಿರುವುದಿಲ್ಲ.
21. ಅಭ್ಯರ್ಥಿಗಳ ಅರ್ಹತೆ ಮತ್ತು ಆಯ್ಕೆಯ ವಿಷಯದಲ್ಲಿ ಕ.ಕ.ರ.ಸಾ.ನಿಗಮದ ಆಯ್ಕೆ ಸಮಿತಿ/ ಸಕ್ಷಮ ಪ್ರಾಧಿಕಾರಿಗಳ ನಿರ್ಧಾರವೇ ಅಂತಿಮವಾಗಿರುತ್ತದೆ.
22. ಅಭ್ಯರ್ಥಿಗಳನ್ನು ನಿಗಮದ ಅವಶ್ಯಕತೆಗೆ ಅನುಗುಣವಾಗಿ ಅವರ ಸೇವಾವಧಿಯಲ್ಲಿ ಕ.ಕ.ರ.ಸಾ. ನಿಗಮದ ಯಾವುದೇ ವಿಭಾಗಗಳಿಗೆ ನಿಯೋಜಿಸಬಹುದಾಗಿರುತ್ತದೆ.
23. ನೇಮಕಾತಿಗೆ ಆಯ್ಕೆಯಾದ ಅಭ್ಯರ್ಥಿಗಳು ಕ.ಕ.ರ.ಸಾ.ನಿಗಮದಿಂದ ರಾಜ್ಯದ ಇತರೆ ಸಾರಿಗೆ ಸಂಸ್ಥೆಗಳಾದ KSRTC, BMTC ಅಥವಾ NWKRTCಗೆ ವರ್ಗಾವಣೆ ಹೊಂದಲು ಅವಕಾಶಗಳಿರುವುದಿಲ್ಲ.

**ವಿಶೇಷ ಸೂಚನೆ: ಆಯ್ಕೆ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಕೈಗೊಳ್ಳಲಾಗುತ್ತಿದ್ದು, ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯಲ್ಲಿ ಕನಿಷ್ಠ 30 ಅಂಕಗಳನ್ನು ಗಳಸಿದ ಅಭ್ಯರ್ಥಿಗಳನ್ನು ಮಾತ್ರ ನೇಮಕಾತಿಯ ಮುಂದಿನ ಹಂತಕ್ಕೆ ಪರಿಗಣಿಸಲಾಗುತ್ತದೆ. ಆದ್ದರಿಂದ ಅಭ್ಯರ್ಥಿಗಳು ಮಧ್ಯವರ್ತಿಗಳ ಅಥವಾ ಯಾವುದೇ ತರಹದ ಆಮಿಷಕ್ಕೆ ಒಳಗಾಗಬಾರದು. ವಿಚಾರಣೆಗಾಗಿ ಸ್ಥಿರ ದೂರವಾಣಿ ಸಂಖ್ಯೆ 08472-227687 ಗೆ ಕಚೇರಿ ಕೆಲಸದ ದಿನಗಳಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.**

**ವ್ಯವಸ್ಥಾಪಕ ನಿರ್ದೇಶಕರು**

**ಪ್ರತಿಯನ್ನು ಗೌರವಪೂರ್ವಕವಾಗಿ :-**

1) ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ಮುಖ್ಯ ಮಂತ್ರಿಗಳ ಸಚಿವಾಲಯ, ವಿಧಾನ ಸೌಧ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸುತ್ತಾ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
2) ಮಾನ್ಯ ಸಾರಿಗೆ ಹಾಗೂ ಪ.ಜಾ./ಪ.ಪಂ.ಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ಸಾರಿಗೆ ಸಚಿವರ ಕಾರ್ಯಾಲಯ, ಸಾರಿಗೆ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸುತ್ತಾ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
3) ಅಧ್ಯಕ್ಷರು, ಕ.ಕ.ರ.ಸಾ.ನಿಗಮ ರವರ ವಿಶೇಷ ಕರ್ತವ್ಯಾಧಿಕಾರಿಗಳ ಮಾಹಿತಿಗಾಗಿ ಕಳುಹಿಸುತ್ತಾ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
4) ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ ರವರ ಮಾಹಿತಿಗಾಗಿ.
5) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 4ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
6) ವ್ಯವಸ್ಥಾಪಕ ನಿರ್ದೇಶಕರು, KSRTC, BMTC & NWKRTC ರವರ ಮಾಹಿತಿಗಾಗಿ ಕಳುಹಿಸಲಾಗಿದೆ.

**ವ್ಯವಸ್ಥಾಪಕ ನಿರ್ದೇಶಕರು**

**ಪ್ರತಿ:-**

- ✓ ನಿರ್ದೇಶಕರು, ವೃತ್ತಿ ಮತ್ತು ಉದ್ಯೋಗ ವಿನಿಮಯ ಕೇಂದ್ರ, ಸುಬ್ಬಯ್ಯ ರಸ್ತೆ, ಬೆಂಗಳೂರು-27 ರವರ ಮಾಹಿತಿಗಾಗಿ.

- ✓ ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಕೇಂದ್ರ, 9/1, ಶ್ರೀ ಪ್ರಶಾಂತ ಕಾಂಪ್ಲೆಕ್ಸ, ಪಿ ಕಾಳಿಂಗರಾವ್ ರಸ್ತೆ, ಬೆಂಗಳೂರು ರವರ ಮಾಹಿತಿಗಾಗಿ.
- ✓ ಉಪ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ ವಸತಿ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
- ✓ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರ ರವರ ಮಾಹಿತಿಗಾಗಿ.
- ✓ ಜಂಟಿ ಕಾರ್ಯದರ್ಶಿಗಳು, ಹೈದ್ರಾಬಾದ-ಕರ್ನಾಟಕ ವಿಶೇಷ ಕೋಶ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರ ಮಾಹಿತಿಗಾಗಿ.
- ✓ ಜಿಲ್ಲಾ ಉದ್ಯೋಗಾಧಿಕಾರಿ /ಉದ್ಯೋಗ ಅಧಿಕಾರಿಗಳು ಕಲಬುರಗಿ/ ಬೀದರ/ ರಾಯಚೂರು/ ಯಾದಗಿರಿ/ ಬಳ್ಳಾರಿ/ ಕೊಪ್ಪಳ/ ವಿಜಯಪುರ ರವರ ಮಾಹಿತಿಗಾಗಿ ಕಳುಹಿಸಲಾಗಿದೆ. ಜಾಹೀರಾತಿನ ಪ್ರತಿಯನ್ನು ಸೂಚನಾ ಫಲಕದ ಮೇಲೆ ಪ್ರಕಟಿಸಲು ಹಾಗೂ ತಮ್ಮ ಕಚೇರಿಯಲ್ಲಿ ನೊಂದಾಯಿಸಲ್ಪಟ್ಟಿರುವ ಅರ್ಹ ಅಭ್ಯರ್ಥಿಗಳಿಗೆ ಜಾಹೀರಾತಿನಂತೆ ನಿಗದಿತ ಕೊನೆಯ ದಿನಾಂಕದೊಳಗೆ ಅರ್ಜಿ ಸಲ್ಲಿಸಲು ಸೂಚನೆ ನೀಡುವಂತೆ ಕೋರಲಾಗಿದೆ.
- ✓ ಸಹಾಯಕ ನಿರ್ದೇಶಕರು, ಉದ್ಯೋಗ ವಿನಿಮಯ ಕಛೇರಿ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ ಅಧಿನಿಯಮ ಜಾರಿ ಘಟಕ) ಸರ್ಕಾರಿ ಕೈಗಾರಿಕೆ ತರಬೇತಿ ಕೇಂದ್ರದ ಹಿಂಭಾಗ, ಎಂ.ಎಸ್.ಕೆ ಮಿಲ್ ರಸ್ತೆ ಕಲಬುರಗಿ ರವರ ಮಾಹಿತಿಗಾಗಿ.
- ✓ ಸಹಾಯಕ ನಿರ್ದೇಶಕರು, ಉದ್ಯೋಗ ವಿನಿಮಯ ಕಛೇರಿ (ಪಿ.ಹೆಚ್.) (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ ಅಧಿನಿಯಮ ಜಾರಿ ಘಟಕ), ಸರ್ಕಾರಿ ಕೈಗಾರಿಕೆ ತರಬೇತಿ ಕೇಂದ್ರದ ಹಿಂಭಾಗ, ಎಂ.ಎಸ್.ಕೆ. ಮಿಲ್ ರಸ್ತೆ, ಕಲಬುರಗಿ ರವರ ಮಾಹಿತಿಗಾಗಿ.
- ✓ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ/ ವಾ.ಕ.ರ.ಸಾ.ಸಂಸ್ಥೆ/ ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
- ✓ ನಿರ್ದೇಶಕರು (ಸಿ&ಭ), ಕ.ರಾ.ರ.ಸಾ.ನಿಗಮ ರವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
- ✓ ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ಕ.ರ.ಸಾ.ನಿಗಮ ರವರ ಮಾಹಿತಿಗಾಗಿ.
- ✓ ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ಕ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಕಾರ್ಮಿಕರ ಮತ್ತು ಸಾರ್ವಜನಿಕರ ಗಮನಕ್ಕಾಗಿ ಜಾಹೀರಾತು ಪ್ರತಿಯನ್ನು ವಿಭಾಗೀಯ ಕಛೇರಿ, ಪ್ರಾದೇಶಿಕ ಕಾರ್ಯಾಗಾರ, ಘಟಕ ಮತ್ತು ಬಸ್ ನಿಲ್ದಾಣಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು.

17/8/2

**ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು**